


ಜೆಮಾ ಬಜಾರಿನಲ್ಲಿ ಉಮೇದಿನಿಂದ ಚಹಾಹುಡಿ ಮಾರುತ್ತಿರುವ ವ್ಯಾಪಾರಿ

ನನ್ನ ಯೋಜನೆಯಂತೆ, ವಿಮಾನ ಮೂಲಕ (ಸೈಕಲ್ ಸಮೇತ) ಬೆಂಗಳೂರಿನಿಂದ ಹೊರಟು, ದಿಲ್ಲಿ ಮುಖಾಂತರ ದುಶಾನ್‌ಬೆ ಮುಟ್ಟಿದೆ. ದುಶಾನ್‌ಬೆಯಿಂದ ಸೈಕಲ್ ಹತ್ತಿ, ಪಾಮಿರ್ ಹೆದ್ದಾರಿ ಹಿಡಿದೆ. ದೈಹಿಕವಾಗಿ ತುಂಬಾ ಪ್ರಯಾಸವೆನಿಸಿದರೂ, ಯಾವುದೇ ವಿಘ್ನಗಳಿಲ್ಲದೆ, ನಿರಾಂತಕವಾಗಿ, ದಾರಿಯನ್ನೂ, ದಾರಿಯ ದೃಶ್ಯಗಳನ್ನೂ ಆನಂದಿಸುತ್ತ, ಜನರೊಡನೆ ಬೆರೆಯುತ್ತ, ಅವರ ಜೀವನ ಕ್ರಮವನ್ನು ಅರಿಯುತ್ತ ಓಶ್ ನಗರ ತಲುಪಿದೆ. ಜಗತ್ತಿನಲ್ಲೇ ಅತ್ಯಂತ ಕಠಿಣ ಮಾರ್ಗ ಎಂದು ಖ್ಯಾತಿ ಪಡೆದಿರುವ, ಪಾಮಿರ್ ಹೆದ್ದಾರಿಯನ್ನು ಯಶಸ್ವಿಯಾಗಿ ಸೈಕಲ್‌ನಲ್ಲೇ ದಾಟಿದ ಜಯದ ಸಂಭ್ರಮವನ್ನು ಆಚರಿಸಿದ್ದು, ಜತೆಗೆ ಪ್ರಯಾಸದ ಪ್ರವಾಸದ ನಂತರ ಎರಡು ದಿನ ವಿರಮಿಸಿದ್ದು ಇದೇ ಓಶ್ ನಗರದಲ್ಲಿ.

## ಐತಿಹಾಸಿಕ ಹಿನ್ನಲೆ

ಸುಮಾರು ಮೂರು ಸಾವಿರ ವರ್ಷಗಳಷ್ಟು ಹಳೆಯದಾದ ಈ ನಗರ, ರೇಷ್ಮೆ ಉತ್ಪಾದನೆಗೆ ಹೆಸರುವಾಸಿಯಾಗಿದ್ದು, ಆಗಿನ ಸಿಲ್ಕ್ ರೂಟ್‌ನ (Silk Route) ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಅಲೆಗ್ಸಾಂಡರ್, ದಿ ಗ್ರೇಟ್, ಭಾರತಕ್ಕೆ ಆಗಮಿಸಿದ್ದು ಈ ನಗರದ ಮೂಲಕವೇ. ಪ್ರಖ್ಯಾತ ಕಿಂಗ್ ಸೊಲೋಮನ್ ಕೆಲ ಸಮಯ ಈ ಊರಲ್ಲಿ ಉಳಿದುಕೊಂಡಿದ್ದನಂತೆ. ಭಾರತದ ದಿಲ್ಲಿಯಲ್ಲಿ ಮೊಘಲ್ ಸಾಮ್ರಾಜ್ಯ ಸ್ಥಾಪಿಸಿದ ಮೊಘಲ್ ದೊರೆ ಬಾಬರ್ ಕೂಡಾ ಭಾರತಕ್ಕೆ ಬರುವ ಮೊದಲು, 1496ನೇ ಇಸವಿಯಲ್ಲಿ ಇದೇ ನಗರದಲ್ಲಿ ತನ್ನ ಮುಂದಿನ ಬದುಕಿನ ಬಗ್ಗೆ, ತನ್ನ ಮುಂದಿನ ವಿಜಯದ ಬಗ್ಗೆ ಪ್ರಾರ್ಥನೆ ಸಲ್ಲಿಸಿದ್ದು. ಅದರ ಉಲ್ಲೇಖ ಬಾಬರನ ಸ್ಮೃತಿ ಪುಸ್ತಕ 'ಬಾಬರ ನಾಮಾ' ದಲ್ಲಿದೆಯಂತೆ.

ನಂತರ ಮಂಗೋಲರ ದಾಳಿಗಳಿಂದ ಪೂರ್ತಿ ಧ್ವಂಸವಾದ ಈ ನಗರ ಪುನರುಜ್ಜೀವನಗೊಂಡು, ನಂತರ ನಿಧಾನವಾಗಿ ಸೋವಿಯತ್ ರಷ್ಯಾದ ಆಧಿಪತ್ಯಕ್ಕೆ ಒಳಗಾಯಿತು. ರಷ್ಯನ್ನರಿಂದ ಬಿಡುಗಡೆ ಪಡೆದ ನಂತರ ಸ್ವತಂತ್ರವಾಗಿ ಬೆಳೆದ ಈ ನಗರ, 1990ರಲ್ಲಿ ನಡೆದ ಭೀಕರ ಜನಾಂಗೀಯ ದಂಗೆಗಳಿಂದ ಪೂರ್ತಿಯಾಗಿ ನಲುಗಿ, ಬಳಲಿ, ಈಗ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ಈಗಲೂ ಹಳೆಯ ದ್ವೇಷದ ಬೆಂಕಿಯ ಭೀತಿ ಇನ್ನೂ ಪೂರ್ತಿಯಾಗಿ ಅರಿಲ್ಲ ಎಂಬುದು ಸ್ಥಳೀಯರ ಅನಿಸಿಕೆ.

## ಕಿಂಗ್ ಸೊಲೋಮನ್ ಪೀಠ

ಸೊಲೊಮನ್ಸ್ ಥ್ರಾನ್ (Solomon's Throne) ಎಂಬ ನಗರದ ಹೃದಯ ಭಾಗದಲ್ಲಿರುವ ಈ ಎತ್ತರದ ಗುಡ್ಡ ಶುರುವಾಗುವುದು ತಳದಲ್ಲಿರುವ ವಿಶಾಲವಾದ ಮುಸ್ಲಿಮರ ಸಮಾಧಿಯಿಂದ. ಈ ಗುಡ್ಡದ ತುದಿಯಲ್ಲಿ ಮೊಘಲ್ ದೊರೆ ಬಾಬರ್ ಕಟ್ಟಿಸಿದ ಸುಂದರ ಮಸೀದಿಯಿದೆ. ಇದು ಮುಸ್ಲಿಮರ ಬಹುಮುಖ್ಯ ಪವಿತ್ರ ಯಾತ್ರಾ ಸ್ಥಳ. ಇಲ್ಲಿನವರು, ಕಡಿದಾದ ಈ ಗುಡ್ಡದ ನೂರಾರು ಮೆಟ್ಟಿಲುಗಳನ್ನು ಹತ್ತಿ ಬಂದು ಇಲ್ಲಿ ನಮಾಜ್ ಸಲ್ಲಿಸುತ್ತಾರೆ.



ಈ ಸ್ಥಳದಲ್ಲಿ ಸಂಜೆಗಳು ತುಂಬಾ ರಮ್ಯವಾಗಿದ್ದು, ಸಂಜೆಯ ಸುಂದರ ಸೂರ್ಯಾಸ್ತವನ್ನು ಸವಿಯಲು ಗೆಳೆಯರು, ಕುಟುಂಬಸ್ಥರು ಮತ್ತು ನಾಗರಿಕರು ಇಲ್ಲಿ ಬಂದು ಸೇರುತ್ತಾರೆ. ಮಸೀದಿಯ ಹಿಂಭಾಗದಲ್ಲೊಂದು ಬೃಹತ್ ಕಲ್ಲಿನ ಜಾರುಬಂಡೆಯಿದ್ದು, ಆ ಬಂಡೆಯ ಮೇಲಿಂದ ಕೆಳಗೆ ಜಾರಿದರೆ, ಬಂಜೆತನದ ಸಮಸ್ಯೆಗಳು ನಿವಾರಣೆಯಾಗುತ್ತದೆ ಎಂಬ ಪ್ರತೀತಿಯಿದೆ! ಹಾಗಾಗಿ ಸಾಕಷ್ಟು ದಂಪತಿಗಳೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಪೀಠದ ಆಯ್ದ ಸ್ಥಳಗಳಿಂದ ಓಶ್ ನಗರದ ವಿಹಂಗಮ ನೋಟವೂ ನೋಡಲು ಸಿಗುತ್ತದೆ.

## ವಸ್ತು ಸಂಗ್ರಹಾಲಯಗಳು

ಸೊಲೋಮನ್ ಪೀಠದ ಆಸುಪಾಸಿನಲ್ಲಿ ಹಲವಾರು ವಸ್ತು ಸಂಗ್ರಹಾಲಯಗಳಿವೆ. ಇವುಗಳಲ್ಲಿ ಅತಿ ದೊಡ್ಡದಾದ ಸಿಲ್ಕ್ ರೋಡ್ (Silk Road Museum) ಮ್ಯೂಜಿಯಂನಲ್ಲಿರುವ ಹಲವು ಪುರಾತತ್ವ, ಭೂಗೋಳ ವಿಜ್ಞಾನ, ಜನಾಂಗೀಯ ಸ್ಥಿತಿಗೆ ಸಂಬಂಧಪಟ್ಟ ಕಣ್ಸೆಳೆಯುವ ವಸ್ತು